ಗುಣವನ್ನು ಸಹಯೋಗದ ರೂಪದಲ್ಲಿ ಕೊಡುವರು. ಇಂತಹ ಆತ್ಮನ ಪ್ರತಿ ದಯಾ ಹೃದಯಿಯಾಗಿ ಶುಭಭಾವನೆ, ಶುಭಕಾಮನೆಯ ಮೂಲಕ ಅವರನ್ನೂ ಪರಿವರ್ತನೆ ಮಾಡುವ ಪ್ರಯತ್ನ ಪಡುತ್ತಾರೆ. ಆತ್ಮಿಕ ರಾಯಲ್ ಆತ್ಮರ ಬಾಯಿಯಿಂದ ಎಂದೂ ವ್ಯರ್ಥ ಹಾಗೂ ಸಾಧಾರಣ ಮಾತು ಬರುವುದಿಲ್ಲ ಯುಕ್ತಿಯುಕ್ತ ಮಾತೇ ಬರುತ್ತವೆ. ಯುಕ್ತಿಯುಕ್ತ ಅರ್ಥಾತ್ ವ್ಯಕ್ತ ಭಾವದಿಂದ ದೂರ ಅವ್ಯಕ್ತ ಭಾವ, ಅವ್ಯಕ್ತ ಭಾವನೆ ಇದಕ್ಕೆ ರಾಯಲ್ಟಿ ಎಂದು ಹೇಳಲಾಗುತ್ತದೆ. ಈ ಸಮಯದ ರಾಯಲ್ಟಿಯು ಭವಿಷ್ಯದ ರಾಯಲ್ ಪರಿವಾರದಲ್ಲಿ ಬರಲು ಅಧಿಕಾರಿಗಳನ್ನಾಗಿ ಮಾಡುತ್ತದೆ. ಅಂದಾಗ ಪರಿಶೀಲನೆ ಮಾಡಿಕೊಳ್ಳಿರಿ. ವೃತ್ತಿಯು ರಾಯಲ್ ಆಗಿದೆಯೇ? ಅರ್ಥಾಥ್ ಸದಾ ಶುಭಭಾವನೆ ಶುಭಕಾಮನೆಯ ವೃತ್ತಿಯಿಂದ ಪ್ರತಿಯೊಂದು ಆತ್ಮನೊಂದಿಗೆ ವ್ಯವಹಾರದಲ್ಲಿ ಬರುವುದು, ಸದಾ ಫರಿಶ್ತಾ ರೂಪದಲ್ಲಿದ್ದು ಅನ್ಯರನ್ನು ಪರಿಶ್ತಾ ರೂಪದಲ್ಲಿ ನೋಡುವುದು, ರಾಯಲ್ ಕೃತಿ ಅರ್ಥಾಥ್ ಸದಾ ಕರ್ಮದಲ್ಲಿ ಸುಖ ನೀಡುವುದು, ಸುಖ ಪಡೆಯುವುದು ಈ ಶ್ರೇಷ್ಠ ಕರ್ಮದ ಪ್ರಮಾಣ ಸಂಪರ್ಕದಲ್ಲಿ ಬರುವುದು. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಇಡೀ ಕಲ್ಪ ಆತ್ಮಿಕ ರಾಯಲ್ ಪರಿವಾರದಲ್ಲಿ ಇದ್ದೇನೆ.

2. ನಾನು ಆದಿಕಾಲದಲ್ಲಿ, ಅನಾದಿಕಾಲದಲ್ಲಿ, ವರ್ತಮಾನ ಸಂಗಮ ಯುಗದಲ್ಲಿ ಮೂರೂ ಕಾಲಗಳಲ್ಲಿ ಆತ್ಮಿಕ ಘನತೆಯ ಹೊಳಪನ್ನು ಹೊಂದಿರುವ ನಂಬರ್ ವನ್ ಆತ್ಮ ಎಂಬ ನಶೆಯಲ್ಲಿ ಇದ್ದೇನೆ.

3. ನನ್ನ ಚಹರೆಯಲ್ಲಿ, ಚಲನೆಯಲ್ಲಿ ಆತ್ಮಿಕ ಘನತೆಯ ಹೊಳಪನ್ನು ಎಲ್ಲರೂ ಅನುಭವ ಮಾಡಿಕೊಂಡಿದ್ದಾರೆ.

4. ನಾನು ಸದಾ ಸಮೃದ್ಧಿಯಾಗಿ, ಸಂಪನ್ನವಾಗಿ ಇರುವ ರಾಯಲ್ ಆತ್ಮ ಅಥವಾ ಉನ್ನತ ಸ್ವರೂಪ.

5. ನಾನು ನನ್ನ ಶ್ರೇಷ್ಠ ಕರ್ಮದಿಂದ ಅಸಂತುಷ್ಟ ಮಾಡುವವರಿಗೂ ಕೂಡ ಸಂತುಷ್ಟತೆಯ ಗುಣವನ್ನು ಸಹಯೋಗ ರೂಪದಲ್ಲಿ ಕೊಟ್ಟು ದಯಾ ಹೃದಯಿಯಾಗಿ ಶುಭ ಭಾವನೆ ಶುಭಕಾಮನೆಯಿಂದ ಪರಿವರ್ತನೆ ಮಾಡಿದ್ದೇನೆ.

6. ನಾನು ಆತ್ಮಿಕ ಘನತೆಯಲ್ಲಿದ್ದು ವ್ಯರ್ಥ ಅಥವಾ ಸಾಧಾರಣ ಮಾತುಗಳನ್ನು ಸಮಾಪ್ತಿ ಮಾಡಿ ನನ್ನ ಪ್ರತಿಯೊಂದು ಮಾತನ್ನು ಯುಕ್ತಿಯುತವಾಗಿ ಮಾಡಿಕೊಂಡಿದ್ದೇನೆ.

7. ನಾನು ಸದಾ ಶುಭ ಭಾವನೆ ಶುಭಕಾಮನೆಯ ವೃತ್ತಿಯಿಂದ ಪ್ರತಿಯೊಂದು ಆತ್ಮದೊಂದಿಗೆ ವ್ಯವಹರಿಸಿ, ಸದಾ ಫರಿಶ್ತಾ ರೂಪದಲ್ಲಿದ್ದು ಇತರರನ್ನು ಕೂಡ ಫರಿಶ್ತಾ ರೂಪದಲ್ಲಿ ನೋಡುವ ನನ್ನ ದೃಷ್ಠಿಯನ್ನಿಟ್ಟುಕೊಂಡು, ಕೃತಿ ಅರ್ಥಾತ್ ಸದಾ ಸುಖವನ್ನು ಕೊಟ್ಟು ಸುಖವನ್ನು ಪಡೆಯುವ ಶ್ರೇಷ್ಠ ಕರ್ಮದಿಂದ ಸಂಪರ್ಕದಲ್ಲಿ ಬಂದು ಈ ಸಮಯದಲ್ಲಿ ನನ್ನ ಘನತೆಯನ್ನು ಉನ್ನತವಾಗಿಟ್ಟುಕೊಂಡು ಭವಿಷ್ಯತ್ತಿನಲ್ಲಿ ರಾಯಲ್ ಕುಟುಂಬದ ಅಧಿಕಾರಿಯಾಗಿದ್ದೇನೆ.

